May 2013 IJRSS Volume 3, Issue 2 ISSN: 2249-2496

# SPECIAL SESSION OF MYSORE CONGRESS AT TUMKUR UNDER THE LEADERSHIP OF S.NIJALINGAPPA: AN ANALYSIS.

- *Dr.H.Krishnegowda*

-

## ಎಸ್.ನಿಜಲಿಂಗಪ್ಪ ಅಧ್ಯಕ್ಷತೆಯ ತುಮಕೂರಿನ ಮೈಸೂರು ಕಾಂಗ್ರೆಸ್ ವಿಶೇಷ ಅಧಿವೇಶನ : ಒಂದು ವಿಶ್ಲೇಷಣೆ

- *ಡಾ.ಎಚ್.ಕೃಷ್ಣೇಗೌಡ*
**ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ,**
**ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮದ್ದೂರು.**

ಭಾರತ ಸ್ವಾತಂತ್ರ್ಯ ಚಳವಳಿಯ ಭಾಗವೇ ಆಗಿರುವ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ ಅನೇಕ ಆಯಾಮಗಳನ್ನು ನಿಧಾನವಾಗಿಯಾದರೂ ಪ್ರಕಟಿಸಿತು. ಇದಕ್ಕೆ ನಿದರ್ಶನವಾಗಿ ಸಂಸ್ಥಾನದಲ್ಲಿ ಜರುಗಿರುವ ಅನೇಕ ಘಟನೆಗಳು, ಸಭೆ, ಸಮಾವೇಶಗಳನ್ನು ಕಾಣಬಹುದು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಚಟುವಟಿಕೆಗಳು ಆರಂಭದಿಂದಲೂ ಬ್ರಿಟೀಷ್ ಭಾರತಕ್ಕೆ ಮಾತ್ರ ಸೀಮಿತವಾಗಿದ್ದವು. ದೇಶ್ಯ ಸಂಸ್ಥಾನಗಳ ರಾಜರು ಭಾರತೀಯರೇ ಆಗಿದ್ದರಿಂದ ಆಯಾ ರಾಜ್ಯ ಜನರ ಯೋಗಕ್ಷೇಮದ ಹೊಣೆಗಾರಿಕೆ ಅವರಿಗೆ ಸೇರಿದ್ದೆಂದು ಕಾಂಗ್ರೆಸ್ ಧುರೀಣರ ಭಾವನೆಯಾಗಿತ್ತು. ಪರಿಣಾಮವಾಗಿ ಅಖಿಲ ಭಾರತ ಕಾಂಗ್ರೆಸ್ ಶಾಖೆಗಳನ್ನು ದೇಶೀಯ ಸಂಸ್ಥಾನಗಳಲ್ಲಿ ಆರಂಭಿಸಿರಲಿಲ್ಲ. ಆಂಗ್ಲ ಭಾರತದಲ್ಲಿ ಕಾಂಗ್ರೆಸ್ ಕಾರ್ಯ ಚಟುವಟಿಕೆಯಿಂದಾಗಿ ಜನರಲ್ಲಿ ತಮ್ಮ ಹಕ್ಕುಗಳನ್ನು ಅರಿಯುವಂತಹ ಜಾಗೃತಿ ಮೂಡುತ್ತಿದ್ದರೂ, ದೇಶೀ ರಾಜರ ಸಂಸ್ಥಾನಗಳಲ್ಲಿ ಜನಜಾಗೃತಿ ಮೂಡಿರಲಿಲ್ಲ. 1920ರಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನಾಗಪುರದಲ್ಲಿ ಜರುಗಿ ಇಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಭಾಷಾ ಆಧಾರದ ಮೇಲೆ 21 ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಗಳನ್ನಾಗಿ ಪುನರ್ರಚಿಸಲಾಯಿತು. ಅದರಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕರ್ನಾಟಕದಲ್ಲಿ ಪ್ರಾರಂಭಗೊಂಡು ಗಂಗಾಧರರಾವ್ ದೇಶಪಾಂಡೆಯವರು ಪ್ರಥಮಾಧ್ಯಕ್ಷರಾದರು. 1921ರಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಶಾಖೆಯನ್ನು "ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ" ಎಂದು ಪರಿಗಣಿಸುವುದರ ಮೂಲಕ ಆರಂಭಿಸಲಾಯಿತು. ಎಸ್.ಎಸ್.ಸೆಟ್ಲೂರ ಪ್ರಥಮ ಅಧ್ಯಕ್ಷರಾದರು. ಆದರೂ ಇದು ಸಂಸ್ಥಾನದಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರಲಿಲ್ಲ. 1928ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ, ಸಂಸ್ಥಾನಗಳ ಆಂತರಿಕ ವ್ಯವಹಾರಗಳಲ್ಲಿ

ಕಾಂಗ್ರೆಸ್ ಭಾಗವಹಿಸಬಾರದೆಂಬ ನಿರ್ಬಂಧವನ್ನು ತೆಗೆದುಹಾಕಲಾಯಿತು. ನಂತರದಲ್ಲಿ ಮೈಸೂರು ಸಂಸ್ಥಾನದ ಹೋರಾಟಗಾರರು ಮೈಸೂರು ಕಾಂಗ್ರೆಸ್ ಎಂಬ ಸ್ವತಂತ್ರವಾದ ಹೊಸ ಸಂಸ್ಥೆ ಆರಂಭಿಸಲು ತೀರ್ಮಾನಿಸಿದರು. ಮೈಸೂರು ಕಾಂಗ್ರೆಸ್‌ಗೆ ಸಂಬಂಧಿಸಿದಂತೆ ನೀತಿ ನಿಯಮಗಳನ್ನು ಲಕ್ಷ್ಮೀನಾರಾಯಣ ಭಟ್ಟರು, ದೊಡ್ಡ ಸ್ವಾಮಯ್ಯಂಗಾರರು, ಗೋಪಾಲಸ್ವಾಮಯ್ಯಂಗಾರು ರಚಿಸಿದರು. 1938ರ ಮಾರ್ಚ್‌ನಲ್ಲಿ ಮೈಸೂರಿನ ಮಿರ್ಲೆ ನಾರಾಯಣಪ್ಪನವರ ಮನೆಯಲ್ಲಿ ಸೇಲಂ ಕಾಂಗ್ರೆಸ್ ನಾಯಕ ಎಸ್.ವೆಂಕಟಪ್ಪಚಟ್ಟಿಯಾರ್ ಅವರಿಮ್ದ 'ಮೈಸೂರು ಕಾಂಗ್ರೆಸ್' ಉದ್ಘಾಟನೆಯಾಯಿತು ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಶಿವಪುರದಲ್ಲಿ ನಡೆಯಿತು. ಎರಡನೇ ಅಧಿವೇಶನ 1939 ಏಪ್ರಿಲ್‌ನಲ್ಲಿ ಹೆಚ್.ಸಿ.ದಾಸಪ್ಪನವರ ಅಧ್ಯಕ್ಷತೆಯಲ್ಲಿ ವಿಧುರಾಶ್ವತ್ಥದಲ್ಲಿ ಜರುಗಿತು. ಮೂರನೇ ಅಧಿವೇಶನ ಶಿವಮೊಗ್ಗ ಹತ್ತಿರದ ಅಜಾದ್‌ನಗರದಲ್ಲಿ 1941ರಲ್ಲಿ ಹೆಚ್.ಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ 1942ರಂದು ಜರುಗಿತು. ನಂತರದಲ್ಲಿ ವಿಶೇಷ ಅಧಿವೇಶನಗಳು ಜರುಗಿ ಅವುಗಳಲ್ಲಿ 1945ರಲ್ಲಿ ಎಸ್.ನಿಜಲಿಂಗಪ್ಪ ನವರ ಅಧ್ಯಕ್ಷತೆಯಲ್ಲಿ ತುಮಕೂರಿನಲ್ಲಿ ಜರುಗಿದ ಮೈಸೂರು ಕಾಂಗ್ರೆಸ್‌ನ ವಿಶೇಷ ಅಧಿವೇಶನ ಬಹಳ ಪ್ರಮುಖವಾದುದಾಗಿದೆ. 1945ರ ಜೂನ್ 16, 17 ಮತ್ತು 18 ರಂದು ಜರುಗಿದ ತುಮಕೂರಿನ ಮೈಸೂರು ಕಾಂಗ್ರೆಸ್ ವಿಶೇಷ ಅಧಿವೇಶನ ಮೈಸೂರು ರಾಜಕಾರಣಕ್ಕೆ ಹೊಸ ನೆಲೆ ಸೃಷ್ಟಿಸಿಕೊಟ್ಟು ಅರಸೊತ್ತಿಗೆಯ ನಿಷ್ಟೆಗೆ ಸವಾಲೆಸದ ಒಂದು ಘಟನೆ ಮಾತ್ರ ಅಲ್ಲ, ಮೈಸೂರಿನ ಭವಿಷ್ಯದ ರಾಜಕಾರಣಕ್ಕೆ ಹೊಸ ಚಿಂತನೆಗಳ ನೆಲೆಗಟ್ಟನ್ನು ರೂಪಿಸಿಕೊಟ್ಟಂತಹ ಅಧಿವೇಶನವಿದು. ಸಾಮ್ರಾಜ್ಯಶಾಹಿ ಹಾಗೂ ಪ್ರಭುತ್ವಶಾಹಿ ವ್ಯವಸ್ಥೆ ಕುಸಿದು ಬೀಳುವ ಎಲ್ಲಾ ಮುನ್ಸೂಚನೆಗಳು ಹೋರಾಟಗಾರಿಗೆ ಕಂಡು ಬಂದದ್ದರಿಮ್ದ ಹೊಸ ವ್ಯವಸ್ಥೆಯ ಪ್ರವಾಗಿ ಹೊಸ ಹೊಸ ಕನಸು ಕಾಣುವ ಸಂದರ್ಭವೂ ಇದಾಗಿತ್ತು. ಆ ಕಾರಣದಿಂದಾಗಿ ತುಮಕೂರಿನ ಅಧಿವೇಶನವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ತುಮಕೂರಿನಲ್ಲಿ ಮೈಸೂರು ಕಾಂಗ್ರೆಸ್‌ನ ವಿಶೇಷ ಅಧಿವೇಶನವನ್ನು ದಿನಾಂಕ 15–06–1945 ರಿಂದ 17–06–1945 ರವರಿಗೆ ಮೂರು ದಿವಸಗಳ ಕಾಲ ಏರ್ಪಡಿಸಲಾಗಿತ್ತು. ಮೊದಲನೇ ದಿವಸ, ಗೃಹಕೈಗಾರಿಕೆ ಹಾಗೂ ಸ್ವದೇಶಿ ವಸ್ತುಪ್ರದರ್ಶನದ ಉದ್ಘಾಟನೆ, ಎರಡನೆ ದಿವಸ ಧ್ವಜಾರೋಹಣದೊಡನೆ ಸಾರ್ವಜನಿಕ ಸಭೆ, ಮೂರನೇ ದಿವಸ ಸಬ್‌ಜೆಕ್ಟ್ ಕಮಿಟಿ ಸಭೆ ಏರ್ಪಡಿಸಲು ನಿರ್ಧರಿಸಿ, ಇದ್ರ ಪೂರ್ವಭಾವಿ ಸಿದ್ಧತೆಗಾಗಿ ಸ್ವಾಗತ ಸಮಿತಿಯೊಂದನ್ನು ನೇಮಿಸಲಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಬಿ.ಸಿ.ನಂಜುಂಡಯ್ಯನವರನ್ನು, ಜನರಲ್ ಸೆಕರೇಟರಿಯಾಗಿ, ಹಾಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಟಿ.ಸುಬ್ರಹ್ಮಣ್ಯಂ ಸದಸ್ಯರಾಗಿ ಮಾಲಿಮರಿಯಪ್ಪ, ಗುಬ್ಬಿ ಹುಚ್ಚಪ್ಪ (ವರ್ತಕ ಸಂಘದ ಅಧ್ಯಕ್ಷ) ರತ್ನಮ್ಮ ಮಾಧವರಾವ್‌ರನ್ನು ನೇಮಿಸಲಾಯಿತು.

ಸ್ವಾಗತ ಸಮಿತಿಯೂ ಸಮಾವೇಶಕ್ಕೆ ಸಂಬಂಧಿಸಿದಂತಹ ಸಂಪನ್ಮೂಲ ಸಂಗ್ರಹಿಸಿ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡೂ, ಸ್ವದೇಶಿ ವಸ್ತು ಪ್ರದರ್ಶನವನ್ನು ತುಮಕೂರಿನ ಜಯದೇವ ಹಾಸ್ಟಲ್‌ನಲ್ಲಿ ಏರ್ಪಡಿಸಿ ಮದ್ರಾಸ್‌ನ ಬುಲು ಸುಶಾಂಭಮೂರ್ತಿಯವರಿಂದ ಉದ್ಘಾಟಿಸಲು ತೀರ್ಮಾನಿಸಿ ಸಾರ್ವಜನಿಕ ಸಭೆ ಹೊಸ ಬಸ್‌ಸ್ಟ್ಯಾಂಡ್ ಮೈದಾನದಲ್ಲಿ ಹಾಗೂ ಸಬ್‌ಜೆಕ್ಟ್ ಸಮಿತಿ ಸಭೆಯನ್ನು ರಾಜ ಟಾಕೀಸಿನಲ್ಲೂ ನಡೆಸಲು ನಿರ್ಧರಿಸಿತು.

ದಿನಾಂಕ 15–06–1945 ರಂದು ಶ್ರೀ ಜಯದೇವ ಹಾಸ್ಟಲ್‌ನಲ್ಲಿ ಐದು ದಿನಗಳವರೆಗೆ ಏರ್ಪಡಿಸಿದ್ದ ಸ್ವದೇಶಿ ವಸ್ತು ಪ್ರದರ್ಶನವನ್ನು ಬುಲುಸುಧಾಂಭಮೂರ್ತಿ ಉದ್ಘಾಟಿಸಿ, ಆಕಾಶವಾಣಿಯಲ್ಲಿ ವೈಸ್‌ರಾಯ್‌ಯವರು ಮಾಡಿದ ಭಾಷಣವನ್ನು ಟೀಕಿಸಿದರು. ಯುದ್ಧದಲ್ಲಿ ತೊಡಗಿರುವ ಇಂಗ್ಲೆಂಡ್ ಭಾರತದೆಡೆಗೆ ಗಮನ ಹರಿಸಬೇಕು, ಬಂಧಿಸಲ್ಪಟ್ಟಿರುವ ಎಲ್ಲಾ ಕಾಂಗ್ರೆಸಿಗರನ್ನು ಬಿಡುಗಡೆಗೊಳಿಸಬೇಕು. ಆಹಾರದ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಶ್ರಮಿಸಬೇಕೆಂದು ಹೇಳಿದರು. ಮೈಸೂರು ಕಾಂಗ್ರೆಸ್, ಸಂಸ್ಥಾನದಲ್ಲಿ ಗೃಹಕೈಗಾರಿಕೆಗಳ ಅಭಿವೃದ್ಧಿಗೆ ಗಮನಹರಿಸಿ ಸ್ವಾವಲಂಬನೆ ಸಾಧಿಸಬೇಕೆಂದರು. ನಂತಾ ವಿದ್ಯಾರ್ಥಿ ಸ್ವಯಂಸೇವಕರು ವಂದೇ ಮಾತರ್‌ಂ ಗೀತೆ ಹಾಡುವುದರ ಮೂಲಕ ಸಭೆ ಮುಕ್ತಾಯವಾಯಿತು. ಕೊಲ್ಲೂರು ಸುಬ್ಬರಾವ್, ಅಂಬೈಪಲ್ಲಿ ಸತ್ಯನಾರಾಯಣರಾವ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.

ಮೊದಲ ದಿನದ ಸಂಜೆ, ಅಧಿವೇಶನದ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರನ್ನು ತುಮಕೂರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಬೇಕೆಂದು ನಿರ್ಧರಿಸಲಾಗಿತ್ತು. ತುಮಕೂರಿನ ಪ್ರಥಮ ನ್ಯಾಯಾಧೀಶರು ಮೈಸೂರು ಪೊಲೀಸ್ ಆ್ಯಕ್ಟ್ ಸೆಕ್ಷನ್ 45ರ ಆಫ್ ಅಡಿಯಲ್ಲಿ ನಗರದಲ್ಲಿ ಆರು ತಿಂಗಳವರೆಗೆ ಯಾವುದೇ ಮೆರವಣಿಗೆ ನಡೆಸಬಾರದೆಂದು ನಿಷೇಧಾಜ್ಞೆ ಹೊರಡಿಸಿದ್ದರು. ಸಂಸ್ಥಾನದ ಸರ್ಕಾರ ಹಾಗೂ ನ್ಯಾಯಾಧೀಶರ ಕ್ರಮವನ್ನು ಟೀಕಿಸಿದ ಟಿ.ಸುಬ್ರಹ್ಮಣ್ಯಂ ಸಂಜೆ 7–30ರ ವೇಳೆಗೆ ವಿನೋಧ ಟಾಕೀಸ್ ನಲ್ಲಿ ಎಸ್.ನಿಜಲಿಂಗಪ್ಪನವರಿಗೆ ತುಮಕೂರಿನ ಜನತೆಯ ಪರವಾಗಿ ಹೃದಯಪೂರ್ವಕ ಸ್ವಾಗತ ಕೋರಿ, ಮೈಸೂರು ಪೇಟ ತೊಡಿಸಿ ಯಶಸ್ವಿಯಾಗಿ ಮೈಸೂರು ಕಾಂಗ್ರೆಸ್ ಮುನ್ನಡೆಸಬೇಕೆಂದು ಮನವಿ ಮಾಡಿದರು. ಮಂಡಿ ವರ್ತಕರಾದ ಚಮ್ದ್ರಶೇಖರಯ್ಯನವರು ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಮತ್ತು ಜನರ ಒಳಿತಿಗಾಗಿ ಶಾಂತಿಯುತವಾಗಿ ಹೋರಾಡಬೇಕೆಂದರು. ಅಂತಿಮವಾಗಿ ಎಸ್.ನಿಜಲಿಂಗಪ್ಪನವರು ಮಾತನಾಡಿ

ಗಾಂಧೀಜಿಯವರ ತತ್ವ ಹಾಗೂ ಕಾಂಗ್ರೆಸ್‌ನ ನೀತಿಗಳಿಗೆ ಭಂಗ ತರದ ರೀತಿ ಮುನ್ನಡೆಯುವ ಭರವಸೆ ನೀಡಿ, ಸ್ವಾಗತ ಕೋರಿದ್ದಕ್ಕೆ ಅಭಿಮಾನದ ವಂದನೆಗಳನ್ನು ಸಲ್ಲಿಸಿದರು.

ದಿನಾಂಕ 16–06–1945ರ ಎರಡನೇ ದಿನದಂದು ಮುಂಜಾನೆ ಹೊಸ ಬಸ್‌ಸ್ಟ್ಯಾಂಡ್ ಮೈದಾನದಲ್ಲಿ ಸಾರ್ವಜನಿಕ ಸಭೆ, ಧ್ವಜಾರೋಹಣ ಹಾಗೂ ವಿದ್ಯಾರ್ಥಿ ಸ್ವಯಂಸೇವಕರು 'ವಿಜಯಿ ವಿಶ್ವತಿ ರಂಗಾಪ್ಯಾರಾ' ಎಂಬ ಗೀತೆಯನ್ನು, ಸ್ವಯಂಸೇವಕಿ ಶ್ರೀಮತಿ ರತ್ನಮ್ಮ ಮಾಧವರಾವ್ 'ವಮ್ದೇಮಾತರಂ' ಗೀತೆ ಹಾಡುವುದರ ಮೂಲಕ ಪ್ರಾರಂಭವಾಯಿತು. ಟಿ.ಸುಬ್ರಹ್ಮಣ್ಯಂ ಮೈಸೂರು ಧ್ವಜವನ್ನು, ಎಸ್.ನಿಜಲಿಂಗಪ್ಪ ಕಾಂಗ್ರೆಸ್ ಧ್ವಜ ಆರೋಹಣವನ್ನು ಮಾಡಿದರು. ನಿಜಲಿಂಗಪ್ಪನವರು ಕಾಂಗ್ರೆಸ್ ಧ್ವಜದ ಮಹತ್ವವನ್ನು ಕುರಿತು ಮಾತನಾಡಿದರು. ಬ್ರಿಟೀಷ್ ವೈಸರಾಯ್ ನಿಲುವು ಟೀಕಿಸಿ, ನ್ಯಾಯಾಧೀಶರು ಹೊರಡಿಸಿರುವ ನಿರ್ಬಂಧಕಾರಿ ಕಾರ್ಯಕ್ರಮಗಳನ್ನು ವಿವರಿಸಿದರು. ಜಯಕಾರದೊಡನೆ ಸಭೆ ಬೆಳಿಗ್ಗೆ 9–45ಕ್ಕೆ ಮುಕ್ತಾಯಗೊಂಡಿತು. ಸುಮಾರು 600 ಜನ ಪುರುಷರು ಹಾಗೂ ಮಹಿಳೆಯರು ಭಾಗವಹಿಸಿದ್ದರು.

ತುಮಕೂರಿನ ಮಂಡಿಪೇಟೆಯಲ್ಲಿದ್ದ ರಾಜಾ ಟಾಕಿಸ್ ಥಿಯೇಟರ್‌ನಲ್ಲಿ ಮಧ್ಯಾನ್ನ 3–15ಕ್ಕೆ ಸಬ್‌ಜೆಕ್ಟ್ ಕಮಿಟಿ ಸಭೆ ಪ್ರಾರಂಭವಾಯಿತು. ಎಸ್.ನಿಜಲಿಂಗಪ್ಪ, ಟಿ.ಸುಬ್ರಹ್ಮಣ್ಯಂ, ಕೆ.ಟಿ.ಭಾಷ್ಯಂ, ಹೆಚ್.ಸಿದ್ಧಯ್ಯ, ಹೆಚ್.ಸಿ.ದಾಸಪ್ಪ, ಕೆಂಗಲ್ ಹನುಮಂತಯ್ಯ, ಹೆಚ್.ಕೆ.ವೀರಣ್ಣಗೌಡ, ಕೆ.ಆರ್.ಮಾಧವರಾವ್, ಹೆಂಜೇರಪ್ಪ, ಕಲ್ಲೂರು ಸುಬ್ಬರಾವ್ ಸ್ವಾಗತಸಮಿತಿ ಸದಸ್ಯರು. ಸ್ವಯಂಸೇವಕರು, ಆಹ್ವಾನಿತರು ಭಾಗವಹಿಸಿದ್ದರು. ಶ್ರೀಮತಿ ರತ್ನಮ್ಮಮಾಧವರಾವ್ ಪ್ರಾರ್ಥನೆಯೊಡನೆ ಸಭೆ ಪ್ರಾರಂಭವಾಯಿತು. ಟಿ.ಸುಬ್ರಮಣ್ಯ ಮಾತನಾಡಿ ಕಾಂಗ್ರೆಸ್ ಮತ್ತು ಸಂಸ್ಥಾನದ ನಡುವೆ ಜವಾಬ್ದಾರಿ ಸರ್ಕಾರ ಸ್ಥಾಪನೆ ಹಾಗೂ ಮಂತ್ರಿಗಳನ್ನು ನೇಮಿಸಿಕೊಳ್ಳುವುದರ ಸಂಬಂಧ ಜರುಗಿದ ಮಾತುಕತೆಗಳು ಹಾಗೂ ವಿಫಲತೆಯನ್ನು ಕುರಿತು ವಿವರಿಸಿದರು. ಅಧಿವೇಶನದ ಅಧ್ಯಕ್ಷರಾದ ಎಸ್.ನಿಜಲಿಂಗಪ್ಪನವರು ಮಾತನಾಡಿ, ಸಮಾವೇಶಕ್ಕಾಗಿ ಶ್ರಮಿಸಿದ ಟಿ.ಸುಬ್ರಹ್ಮಣ್ಯರವರನ್ನು ಶ್ಲಾಘಿಸಿದರು. ನಿಷೇಧಾಜ್ಞೆ ಇರುವುದರಿಂದ ಎಲ್ಲರೂ ಶಾಂತಿಯಿಂದ ವರ್ತಿಸಿ ಸಮಾವೇಶದ್ ಯಶಸ್ಸಿಗೆ ನೆರವಾಗಬೇಕೆಂದರು. ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಆ ಸಂದರ್ಭದಲ್ಲಿ 1942ರ ಕ್ವಿಟ್ ಇಂಡಿಯಾ ಚಳವಳಿ ಅಂಗವಾಗಿ ಭಾಗವಹಿಸಿ ದೇಶಕ್ಕಾಗಿ ಪ್ರಾಣತೆತ್ತವರನ್ನೂ, ಜೈಲು ಶಿಕ್ಷೆ ಅನುಭವಿಸಿದವರನ್ನೂ ಸ್ಮರಿಸಿಕೊಳ್ಳಲಾಯಿತು.

ಈ ವಿಶೇಷ ಅಧಿವೇಶನದಲ್ಲಿ ಕಸ್ತೂರಬಾ ಗಾಂಧೀ ಅಬ್ದುಲ್ ಖಲಾಂ ಅಜಾದ್ ಮಹದೇವ ದೇಸಾಯಿ ಆರ್.ಎಸ್.ಪಂಡಿತ್, ಎಸ್.ಸತ್ಯಮೂರ್ತಿ, ನಾರಾಯಣರಾವ್ ಜೋಷಿ, ಹನುಮಂತರಾವ್ ಕೌಜಲಗಿ, ಮಹದೇವರಾವ್ ಕಬೂರ್, ಯಲಹಂಕ ವೀರಭದ್ರಪ್ಪ, ಮೈಸೂರಿನ ಎಂ.ವಿ.ಪುಟ್ಟಸ್ವಾಮಿ, ಮಳವಳ್ಳಿ ಗೋಪಾಲನಾಯಕ್ ಮುಂತಾದ ಮಹನೀಯರ ಸಾವಿಗೆ ಶೋಕ ವ್ಯಕ್ತಪಡಿಸಲಾಯಿತು.

ಈಸೂರಿನ ಘಟನೆಯಲ್ಲಿ ನೇಣುಗಂಬವೇರಿದವರಿಗೆ, ಶಿಕ್ಷೆಗೊಳಗಾದವರಿಗೆ, ಶ್ರವಣಬೆಳಗೊಳ, ತಿಪಟೂರು ಘಟನೆಯಲ್ಲಿ ನೊಂದವರಿಗೆ ಶೋಕ ವ್ಯಕ್ತಪಡಿಸಲಾಯಿತು. ಸೆರೆಮನೆಯಲ್ಲಿರುವ ಎಲ್ಲಾ ರಾಜಕೀಯ, ಖೈದಿಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲಾಯಿತು. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ಮುಂದುವರಿಸಲು ತೀರ್ಮಾನಿಸಲಾಯಿತು. ನಂತರ ಸಭೆ ರಾತ್ರಿ ಏಳು ಗಂಟೆಗೆ ಮುಕ್ತಾಯಗೊಂಡಿತು.

ರಾತ್ರಿ ಎಂಟು ಗಂಟೆಗೆ ಸಾರ್ವಜ್ನಿಕ ಸಭೆಯು ಹೊಸ ಬಸ್ಸ್ಟ್ಯಾಂಡ್ ಮೈದಾನದಲ್ಲಿ ರಾಷ್ಟ್ರಗೀತೆ ಹಾಗೂ 'ವಮ್ದೇ ಮಾತರಂ' ಗೀತೆಯೊಡನೆ ಪ್ರಾರಂಭಗೊಂಡಿತು. ಸುಮಾರು 1500 ಜನ ಪುರುಷರು ಹಾಗೂ 500 ಜನ ಸ್ತ್ರೀಯರು ಭಾಗವಹಿಸಿದ್ದರು. ಮಾಲಿ ಮರಿಯಪ್ಪನವರು ಎಲ್ಲರಿಗೂ ಸ್ವಾಗತ ಕೋರಿದರು. ಕೆ.ಟಿ.ಭಾಷ್ಯಂ, ಹೆಚ್.ಸಿ.ದಾಸಪ್ಪ, ಹೆಚ್.ಸಿದ್ಧಯ್ಯ ಮಾತನಾಡಿ ಎಸ್.ನಿಜಲಿಂಗಪ್ಪನವರ ಸರಳ ಸಜ್ಜನಿಕೆಯನ್ನು ಬಣ್ಣಿಸಿದರು. ಸ್ವಾಗತ ಸಮಿತಿಯ ಬಿ.ಸಿ.ನಂಜುಂಡಪ್ಪ ಮಾತನಾಡಿ, ಅಧಿವೇಶನದ ಯಶಸ್ಸಿಗೆ, ಸೈಯ್ಯದ್ ಮಹಮದ್, ಗಂಗಾಧರರಾವ್ ದೇಶಪಾಂಡೆ, ಎಸ್.ಎಸ್.ಹರ್ಡೀಕಲ್, ಮುತ್ತುರಂಗ ಮುದಲಿಯಾರ್, ಡಿ.ಹೆಚ್.ಚಂದ್ರಶೇಖರಯ್ಯ ಅವರು ಕಳುಹಿಸಿರುವ ಸಂದೇಶ ವಾಚಿಸಿದರು. ನಿಜಲಿಮ್ಗಪ್ಪನವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ಕೇಂದ್ರದಲ್ಲಿ ಜನಪ್ರಿಯ ಸರ್ಕಾರ ರಚಿಸಲು ಸೆರೆಮನೆಯಲ್ಲಿರುವ ಎಲ್ಲಾ ನಾಯಕರನ್ನು ಬಿಡುಗಡೆ ಮಾಡಬೇಕು, ಸ್ವಾತಂತ್ರ್ಯ ಚಳವಳಿ ಈ ಸ್ಥಿತಿ ತಲುಪಲಿಕ್ಕೆ ತಮ್ಮ ತನುಮನ ಸಮರ್ಪಿಸಿರುವವರಿಗೆಲ್ಲ ನನ್ನ ನಮನಗಳನ್ನು ಸಲ್ಲಿಸುತ್ತೇನೆ ಎಂದರು.

ದಿನಾಂಕ 17–06–1945ರಂದು ಅಧಿವೇಶನದ ಅಂತಿಮ ದಿನದ ಕಾರ್ಯಕ್ರಮಗಳು ಧ್ವಜವಂದನೆಯೊಡನೆ ಮಂಜಾವಿನಲ್ಲಿ ಪ್ರಾರಂಭಗೊಂಡವು. ಹೊಸ ಬಸ್ಸ್ಟಾಂಡ್ ಮೈದನದಲ್ಲಿ ಪ್ರಾರಂಭಗೊಂಡ ಸಭೆಯಲ್ಲಿ 400ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಹೆಚ್.ಸಿದ್ಧಯ್ಯನವರು ಮಾತನಾಡಿ ಶೀಘ್ರದಲ್ಲಿಯೇ ಮಹಾರಾಜರು ಜವಾಬ್ದಾರಿ ಸರ್ಕಾರ ದಯಪಾಲಿಸುತ್ತಾರೆಂದು ನಂಬೋಣ ಎಂದರು. ಮಾಲಿ ಮರಿಯಪ್ಪನವರು ಮಾತನಾಡಿ ನಾವೆಲ್ಲರೂ ಐಕ್ಯತೆಯಿಂದ ಕೆಲಸ ಮಾಡಿದರೆ ಜಯ ಕಟ್ಟಿಟ್ಟ ಬುತ್ತಿ

ಎಮ್ದರು. ಬೆಳಿಗ್ಗೆ 9–30ಕ್ಕೆ ಸಭೆ ಮುಕ್ತಾಯಗೊಂಡಿತು. ತುಮಕೂರಿನ ರಾಜ ಟಾಕೀಸ್‌ನಲ್ಲಿ ಪೂರ್ವಾಹ್ನ 10–45ಕ್ಕೆ ಎಸ್.ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಬ್‌ಜೆಕ್ಟ್ ಕಮಿಟಿ ಸಭೆ ಪ್ರಾರಂಭವಾಯಿತು. ಹೆಚ್.ಕೆ.ವೀರಣ್ಣಗೌಡ, ಕೆ.ಟಿ.ಭಾಷ್ಯಂ, ಕೆ.ಸಿ.ರೆಡ್ಡಿ, ಕೆ.ಪಟ್ಟಾಭಿರಾಮನ್, ಹೆಚ್.ಸಿ.ದಾಸಪ್ಪ, ಮುಂತಾದ 75 ಜನ ಗಾಂಗ್ರೆಸ್ ಮುಖಂಡರು ಭಾಗವಹಿಸಿದ್ದು, ಅನೇಕ ವಿಷಯಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಂಡರು. ಹೆಚ್.ಸಿದ್ಧಯ್ಯನವರು ಮಾತನಾಡಿ ಸಂಸ್ಥಾನದ ಸರ್ಕಾರ ಕಾಂಗ್ರೆಸಿಗರ ವಿರುದ್ಧ ಹೊರಡಿಸಿರುವ 45 ಎಂ.ಪಿ.ಆರ್. ಒಳಗೊಂಡಂತೆ ಎಲ್ಲಾ ನಿಷೇದಾಜ್ಞೆಗಳನ್ನು ಹಿಂತೆಗೆದುಕೊಂಡು ಕೂಡಲೇ ಸೆರೆಯಲ್ಲಿರುವವರನ್ನೆಲ ಬಿಡುಗಡೆ ಮಾಡಬೇಕೆಂದರು. ಎಲ್ಲರೂ ಕರತಾಡನದ ಮುಖಾಂತರ ಇದನ್ನು ಅಂಗೀಕರಿಸಿದರು. ಕೆ.ಜಿ.ಎಫ್. ಹಾಗೂ ಬೆಂಗಳೂರಿನ ಕಾರ್ಮಿಕರ ವಿರುದ್ಧ ವಿಧಿಸಿರುವ ಆರೋಪ, ಶಿಕ್ಷೆಗಳನ್ನು ರದ್ದುಗೊಳಿಸಿ ಅವರ ಕುಟುಂಬಗಳು ಬೀದಿ ಪಾಲಾಗುವುದನ್ನು ತಪ್ಪಿಸಬೇಕೆಂಬ ನಿರ್ಣಯವನ್ನು ಕೆ.ಆರ್.ಮಾಧವರಾವ್ ನೇತೃತ್ವದಲ್ಲಿ ಅಂಗೀಕ್ರೈಸಲಾಯಿತು. ಕಾರ್ಮಿಕ ನಾಯಕರಾದ ಕೆ.ಎಸ್.ಕುಮಾರನ್, 45 ಎಂ.ಪಿ.ಆರ್. ನಿಂದಾಗಿ ನಾವು ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಕರೆತರಲು ಸಾಧ್ಯವಾಗಲಿಲ್ಲ. ಈ ನಿರ್ಬಂಧವನ್ನು ಧಿಕ್ಕರಿಸಲು ಇದೇ ಸುಸಂದರ್ಭ ಇದರ ವಿರುದ್ಧ ಹೋರಾಟವನ್ನು ಅಧಿವೇಶನ ಮುಗಿದ ಮರುದಿನದಿಂದಲೇ ಪ್ರಾರಂಭ ಮಾಡೋಣ ಎಂದರು. ಟಿ.ಸುಬ್ರಹ್ಮಣ್ಯಂ ಮತ್ತು ಕೆ.ಟಿ.ಭಾಷ್ಯಂ ನಾವು ಮುಂದೆ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಸೆಣಸಬೇಕಾಗಿದೆ, ಅದು ನಮ್ಮ ಮುಖ್ಯ ಗುರಿಯಾಗಲಿ ಎಂದರು. ಮೂರು ವರ್ಷಗಳ ಹಿಂದೆ ಹೊರಡಿಸಿದ್ದ ಕೆಲವು ನಿಷೇದಾಜ್ಞೆಗಳನ್ನು ಸರ್ಕಾರ ಮುಂದುವರಿಸುತ್ತಿದೆ. ಕೆಲವರಿಗೆ ಇವುಗಳಿಂದ ತುಂಬಾ ತೊಂದರೆಯಾಗಿದೆ. ಸದ್ಯದ ಪರಿಸ್ಥಿತಿ ತಿಳಿಯಾಗಿರುವುದರಿಂದ ಅವೆಲ್ಲವನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಲಾಯಿತು.

ಪ್ರಸ್ತುತ ಸಭೆಯು ಹೊಳೆನರಸಿಪುರ ಹಾಗೂ ನೆಹರೂ ನಗರದ ಅಧಿವೇಶನಗಳಲ್ಲಿ ತೆಗೆದುಕೊಂಡಿದ್ದ ತೀರ್ಮಾನದಂತೆಯೇ ಇಲ್ಲಿಯೂ ತಕ್ಷಣ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಒತ್ತಾಯಿಸುತ್ತದೆ ಎಂದು ಕೆ.ಟಿ.ಭಾಷ್ಯಂ ನಿರ್ಣಯ ಸೂಚಿಸಿದರು. ಎನ್.ಸಿ.ತಿಮ್ಮಾರೆಡ್ಡಿ ಇದಕ್ಕೆ ಧ್ವನಿಗೂಡಿಸಿದರು.

ಈ ವಿಶೇಷ ಅಧಿವೇಶನದ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಯುತ್ತಿದೆ. ಕಾಂಗ್ರೆಸ್ಸಿಗರೊಡನೆ ಸಮಸ್ಯೆಯ ಇತ್ಯರ್ಥಕ್ಕೆ ಸಹಕರಿಸಬೇಕು. ಇಲ್ಲವಾದಲ್ಲಿ ಇದಕ್ಕೆ ದುಬಾರಿ ಬೆಲೆ ತೆರಬೇಕಾಗುತ್ತದೆ ಎಂದು ಸಭೆ ನಿರ್ಣಯಿಸಿತು. ಸಭೆಯಲ್ಲಿ ಕಳೆದ ಮೂರು ವರ್ಷಗಳ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಬೆಳವಣಿಗೆಗಳನ್ನು ಚರ್ಚಿಸಿ ಯುದ್ಧದಿಂದಾಗಿ ಭಾರತಕ್ಕಾಗಿರುವ ನಷ್ಟ, ಜನರು ಅನುಭವಿಸಿರುವ

ತೊಂದರೆಗಳನ್ನು ಸರಿಪಡಿಸಿ ಭಾರತವನ್ನು ಪುನರ್ನಿರ್ಮಿಸಬೇಕಾದರೆ ಜವಾಬ್ದಾರಿ ಸರ್ಕಾರ ಅತ್ಯಗತ್ಯ. ಸಂಸ್ಥಾನದಲ್ಲಿ ದಿವಾನರು ಹಾಗೂ ಮಹಾರಾಜರು ಸಹಕರಿಸಿ ಜನರ ಸರ್ಕಾರ ಸ್ಥಾಪನೆಗೆ ಅನುವು ಮಾಡಿಕೊಡಬೇಕೆಂದು ಕೆ.ಹನುಮಂತಯ್ಯವರು ನಿರ್ಣಯಿಸಿದರು. ಮೇಲಿನ ತೀರ್ಮಾನಗಳೊಡನೆ ಸಭೆ ಅಪರಾಹ್ನ 2–10ಕ್ಕೆ ಮುಕ್ತಾಯವಾಯಿತು.

ಮೂರನೇ ದಿವಸದ ಅಂತಿಮ ಸಭೆ ಸಂಜೆ 7–40ಕ್ಕೆ ಬಸ್‌ಸ್ಟ್ಯಾಂಡ್ ಮೈದಾನದಲ್ಲಿ ಏರ್ಪಟ್ಟು ಸುಮಾರು 2000 ಜನ ಭಾಗವಹಿಸಿದ್ದರು. ಅಧಿವೇಶನದ ಅಧ್ಯಕ್ಷರಾದ ಎಸ್.ನಿಜಲಿಂಗಪ್ಪನವರು ಸಬಜೆಕ್ಟ್ ಕಮಿಟಿಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಜನರಿಗೆ ತಿಳಿಸಿದರು. ಎನ್.ಸಿ.ತಿಮ್ಮಾರೆಡ್ಡಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಕುರಿತು ವಿವರಿಸಿದರು. ಕೆ.ಹನುಮಂತಯ್ಯನವರು ಮತ್ತೊಮ್ಮೆ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಒತ್ತಾಯಿಸಿದರು. ಅಂತಿಮವಗಿ ಅಧಿವೇಶನದ ಅಧ್ಯಕ್ಷರು ಮುಂದಿನ ಸಮಾವೇಶ ಹಾಸನದಲ್ಲಿ ಜರುಗುವುದೆಂದು ಘೋಷಿಸಿದರು. ರಾತ್ರಿ 10 ಗಂಟೆಗೆ ವಮ್ದೇ ಮಾತರಂ ಹಾಗೂ ಜಯಕಾರಗಳೊಡನೆ ಅಧಿವೇಶನದ ಕೊನೆ ಸಭೆ ಮುಕ್ತಾಯಗೊಂಡಿತು.

ಈ ಅಧಿವೇಶನದ ಮುಖ್ಯ ಫಲಿತಾಂಶವೆಂದರೆ ಎಸ್.ನಿಜಲಿಂಗಪ್ಪ ನೇತೃತ್ವದಲ್ಲಿ ಜರುಗಿದ ಈ ವಿಶೇಷ ಅಧಿವೇಶನ ಸಂಸ್ಥಾನದ ನಾಯಕರ ಸಂಘಟನೆಗೆ ಜವಾಬ್ದಾರಿ ಸರ್ಕಾರ ಸ್ಥಾಪನೆ ಚಳುವಳಿ ಕಾವು ಇಮ್ಮಡಿಸುವುದಕ್ಕೆ ಪೂರಕವಾಯಿತು. ಗಾಂಧೀಜಿಯವರ ಕಾರ್ಯಕ್ರಮ, ಹೋರಾಟ, ಶಾಂತಿ, ಶಿಸ್ತು, ಸಮನ್ವಯತೆಗಳನ್ನು ಬಿಂಬಿಸಿತು. ಎಸ್.ನಿಜಲಿಂಗಪ್ಪನವರ ಮೇರು ವ್ಯಕ್ತಿತ್ವ ಈ ಅಧಿವೇಶನದಿಂದ ಹೊರಹೊಮ್ಮಿತು. ಅಷ್ಟೇ ಅಲ್ಲದೆ ಪ್ರಭುತ್ವವಾದಿ ಹಾಗೂ ಅಧಿಕಾರಶಾಹಿ ಕ್ರಮಗಳನ್ನು ಪ್ರತಿಭಟಿಸುವ ಮೂಲಕ ಜನಾಭಿಪ್ರಾಯವನ್ನು ಮನ್ನಿಸಬೇಕಾದ ಒತ್ತಡವನ್ನು ಹುಟ್ಟುಹಾಕಿತು. ಮೈಸೂರು ಚಲೋ ಚಳವಳಿಗೆ ವಿಸ್ತಾರ ಹಾಗೂ ಒಗ್ಗಟ್ಟಿನ ನೆಲೆಗಟ್ಟನ್ನು ಸೃಷ್ಟಿಸಿಕೊಟ್ಟಿತು. ಮಿಗಿಲಾಗಿ ಮುಂದಿನ ಕರ್ನಾಟಕ ರಾಜಕಾರಣಕ್ಕೆ ದಿಕ್ಸೂಚಿಯಾಗಿ ಗಂಭೀರವಾಗಿ ಹೋರಾಟ ರೂಪಿಸಲು ವೇದಿಕೆ ಹುಟ್ಟು ಹಾಕಿತು.

**ಆಧಾರಸೂಚಿ ಮತ್ತು ಟಿಪ್ಪಣಿಗಳು**

1. ಡಾ.ಸೂರ್ಯನಾಥ ಕಾಮತ್, (ಪ್ರ.ಸಂ.) ಬೆಂಗಳೂರು ಗ್ರಾಮಾಂತರ ಜಿಲ್ಲಾ ಗ್ಯಾಸೆಟಿಯರ್, ಪುಟ–65, ಕರ್ನಾಟಕ ಸರ್ಕಾರ – 1989

2. ಪ್ರೋ.ಕೆ.ವೀರತಪ್ಪ, ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿ, ವಿಜಯರವಿ ಪ್ರಕಾಶನ, ಬೆಂಗಳೂರು–1977. ಪುಟ–100
3. ಪ್ರೊ.ಡಿ.ಲಿಂಗಯ್ಯ, ಸತ್ಯಾಗ್ರಹಿಗಳ ಸಂದರ್ಶನ, ದಿನಕರ ಪ್ರಕಾಶನ 1998, ಎಂ.ಎನ್.ಜೋಹಿಕ್ಷರ ಸಂದರ್ಶನ ಪುಟ 27
4. ಪೂರ್ವೋಕ್ತ, ಪುಟ 45, 5. ಅದೇ., ಪುಟ 66. 6. ಅದೇ, ಪುಟ 84., 7 ಅದೇ, ಪುಟ 94, 8. ಅದೇ, ಪುಟ 101
5. Special Branch Abstract, No.24/45, Date 16-6-1945 page 99-101, Regional Archives, Mysore.
6. Special Branch Abstract, No.24/45, Date 16-6-1945 page 99-101, Regional Archives, Mysore.
7. Special Branch Abstract, No.25/45, Date 23-6-1945, page 106-109, Regional Archives, Mysore.